Phone: 91- 080-23330984/149
Telefax: 91- 080-23330984

Website :www.uasbangalore.edu.in
Email :registrar@uasbangalore.edu.in

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ಕುಲಸಚಿವರ ಕಛೇರಿ, ನಾಯಕ್ ಭವನ, ಗಾಕೃವಿಕೆ, ಬೆಂಗಳೂರು
UNIVERSITY OF AGRICULTURAL SCIENCES, BANGALORE
Office of the Registrar, GKVK, Bengaluru-560065

ಸಂಖ್ಯೆ:ಕುಸ/ಸಕುಸ/ಅಧೀಕ್ಷಕರು/ಯುಜಿ ಐ.ಸಿ.ಆರ್ ಮುಕೌ/2024-25 ದಿನಾಂಕ:27.11.2024

## ಅಧಿಸೂಚನೆ

**ವಿಷಯ:** ರಾಜ್ಯದ ವಿವಿಧ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯಗಳಲ್ಲಿ ವಿವಿಧ ಸ್ನಾತಕ ಪದವಿಗಳಿಗೆ ಸಿಯುಇಟಿ(ಐ.ಸಿ.ಎ.ಆರ್) (CUET(ICAR) 2024 ಕೋಟಾದಡಿ ಭರ್ತಿಯಾಗದೇ ಉಳಿದಿರುವ ಸೀಟುಗಳಿಗೆ ದಿನಾಂಕ: 04.12.2024 ರಂದು ಮುಕ್ತ ಕೌನ್ಸಲಿಂಗ್ ಪ್ರಕ್ರಿಯೆ ನಡೆಸುವ ಕುರಿತು.,

**ಉಲ್ಲೇಖ:** 1. ರಾಜ್ಯದ ಎಲ್ಲಾ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯಗಳು ಮಿಂಚಂಚೆಯ ಮೂಲಕ ತಮ್ಮ ಸಹಮತಿ ಸೂಚಿಸಿರುವುದು ದಿನಾಂಕ:26.11.2024
2.ವಿವಿಧ ಕೃಷಿ ಹಾಗೂ ತೋಟಗಾರಿಕೆ ವಿಶ್ವವಿದ್ಯಾನಿಲಯಗಳ ಪರವಾಗಿ ಮಾನ್ಯ ಕುಲಪತಿಗಳು, ಕೃವಿವಿ, ಬೆಂಗಳೂರು ಇವರ ಅನುಮೋದನೆಯ ದಿನಾಂಕ: 27.11.2024

***

ಶೈಕ್ಷಣಿಕ ವರ್ಷ 2024-25ನೇ ಸಾಲಿನ ಪ್ರಥಮ ವರ್ಷದ ಸ್ನಾತಕ ಪದವಿಗಳಿಗೆ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು, ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಬಾಗಲಕೋಟೆ, ಕೃಷಿ ವಿಶ್ವವಿದ್ಯಾನಿಲಯ, ರಾಯಚೂರು, ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ ಮತ್ತು ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯ, ಶಿವಮೊಗ್ಗ ಈ ವಿಶ್ವ ವಿದ್ಯಾನಿಲಯಗಳಲ್ಲಿ ವಿವಿಧ ಸ್ನಾತಕ ಪದವಿಗಳಿಗೆ ಸಿಯುಇಟಿ (ಐ.ಸಿ.ಎ.ಆರ್) (CUET(ICAR) 2024 ಅಡಿಯಲ್ಲಿ ನಡೆಸಿದ ಅಂತಿಮ ಸುತ್ತಿನ ಪ್ರವೇಶಾತಿ ಪ್ರಕ್ರಿಯೆಯ ನಂತರವೂ ಭರ್ತಿಯಾಗದೆ ಉಳಿದಿರುವ ಪ್ರವರ್ಗವಾರು ಸೀಟುಗಳನ್ನು ದಿನಾಂಕ 04.12.2024ರಂದು ಮುಕ್ತ ಕೌನ್ಸಲಿಂಗ್ ಆಯ್ಕೆ ಪ್ರಕ್ರಿಯೆ ಮೂಲಕ ಈ ಕೆಳಗಿನ ವೇಳಾಪಟ್ಟಿಯ ಅನುಸಾರ ಭರ್ತಿ ಮಾಡಲಾಗುವುದು.

| ಪ್ರಕ್ರಿಯೆಗಳು | ದಿನಾಂಕ ಮತ್ತು ಸಮಯ | ಸ್ಥಳ |
|---|---|---|
| ಆನ್‌ಲೈನ್ (Online) ಮೂಲಕ ಅರ್ಜಿ ಸಲ್ಲಿಕೆ | 27.11.2024 ರಿಂದ 02.12.2024 ಸಂಜೆ 06.00ಗಂಟೆಯವರೆಗೆ | ಎಲ್ಲಾ ವಿಶ್ವವಿದ್ಯಾನಿಲಯಗಳ ಅಧಿಕೃತ ಜಾಲತಾಣಗಳು: www.uasbangalore.edu.in, www.uasd.edu.in, www.uasraichur.edu.in, www.uahsbagalkot.edu.in, www.uahs.in |
| ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ | 03.12.2024 ಬೆಳಗ್ಗೆ 10.00ಗಂಟೆಯ ನಂತರ | ಎಲ್ಲಾ ವಿಶ್ವವಿದ್ಯಾನಿಲಯಗಳ ಅಧಿಕೃತ ಜಾಲತಾಣಗಳು: www.uasbangalore.edu.in, www.uasd.edu.in, www.uasraichur.edu.in, www.uahsbagalkot.edu.in, www.uahs.in |
| CUET (ICAR-UG)-2024 ಮುಕ್ತ ಕೌನ್ಸಲಿಂಗ್ ಮತ್ತು ಪ್ರವೇಶಾತಿ | 04.12.2024ರಂದು ಬೆಳಗ್ಗೆ 10.00ಗಂಟೆಯಿಂದ | ನಾರ್ಥ್ ಬ್ಲಾಕ್ ಆಡಿಟೋರಿಯಮ್, ಕೃವಿವಿ, ಗಾಕೃವಿಕೇ., ಬೆಂಗಳೂರು |

**ಆನ್‌ಲೈನ್ ಅರ್ಜಿ ಶುಲ್ಕ:** 1. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ-I ಅಭ್ಯರ್ಥಿಗಳಿಗೆ ರೂ. 250/-
2. ಇತರೆ ಅಭ್ಯರ್ಥಿಗಳಿಗೆ ರೂ.500/-

ಈ ಮುಕ್ತ ಕೌನ್ಸಲಿಂಗ್ ಪ್ರಕ್ರಿಯೆಯಲ್ಲಿ ಪ್ರವೇಶಾತಿ ಬಯಸುವ ಆಸಕ್ತ ಮತ್ತು ಅರ್ಹ ಅಭ್ಯರ್ಥಿಗಳು ನಿಗದಿಪಡಿಸಿದ ಶುಲ್ಕದೊಂದಿಗೆ ಅರ್ಜಿಯನ್ನು ಆನ್‌ಲೈನ್ (Online) ಮೂಲಕ ಮಾತ್ರ ಸಲ್ಲಿಸತಕ್ಕದ್ದು ಹಾಗೂ ಅರ್ಜಿ ಸಲ್ಲಿಸುವಾಗ ಅರ್ಜಿಯ ಶುಲ್ಕವನ್ನು ಸಹ ಆನ್‌ಲೈನ್ (Online) ಮೂಲಕವೇ ಪಾವತಿಸಬೇಕಾಗಿರುತ್ತದೆ. ಅಂಚೆ ಅಥವಾ ಇತರೆ ಮೂಲಗಳಿಂದ ಸಲ್ಲಿಸಿದ ಅರ್ಜಿಗಳನ್ನು ಪರಿಗಣಿಸುವುದಿಲ್ಲ.

ರಾಜ್ಯದ ಕೃಷಿ / ತೋಟಗಾರಿಕೆ ಹಾಗೂ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯಗಳಲ್ಲಿ ಲಭ್ಯವಿರುವ ಸೀಟುಗಳಿಗೆ, ಮುಕ್ತ ಕೌನ್ಸಲಿಂಗ್ ಆಯ್ಕೆ ಪ್ರಕ್ರಿಯೆಯನ್ನು ಒಂದೇ ಸ್ಥಳದಲ್ಲಿ ಅಂದರೆ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಇಲ್ಲಿಯೇ ನಡೆಸಲಾಗುವುದು.

ಮು.ತಿ.ನೋ

ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯಗಳ ಸ್ನಾತಕ ಪದವಿಗಳಿಗೆ ನಡೆಸಿದ CUET (ICAR) UG-2024 ಪರೀಕ್ಷೆಗಳನ್ನು ಬರೆದು ರ್‍ಯಾಂಕ್ ಪಡೆದ **ಕರ್ನಾಟಕದ ಅಭ್ಯರ್ಥಿಗಳು ಮಾತ್ರ** ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತಾರೆ:

1. CUET (ICAR) ಕೋಟಾದಡಿ ಭಾಗವಹಿಸುವ ಅಭ್ಯರ್ಥಿಗಳು ಕಡ್ಡಾಯವಾಗಿ CUET (ICAR) ನಡೆಸುವ ಪ್ರವೇಶಾತಿ ಪರೀಕ್ಷೆ ಬರೆದಿದ್ದು ICAR ನೀಡಿದ ರ್‍ಯಾಂಕ್ ಪಟ್ಟಿ ಹಾಗೂ ರಿಜಿಸ್ಟ್ರೇಷನ್‌ಗೆ ಅರ್ಹರಾಗಿರುವ ಪ್ರತಿಯನ್ನು ಕಡ್ಡಾಯವಾಗಿ ಹೊಂದಿರಬೇಕು.
2. ಸೀಟ್‌ಮ್ಯಾಟ್ರಿಕ್ಸ್‌ನಲ್ಲಿ ಪ್ರಕಟಿಸಿರುವ ಪ್ರವರ್ಗದಡಿಗಳಲ್ಲಿ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಸೀಟುಗಳನ್ನು ನಿಯಮಾನುಸಾರ ಸಾಮಾನ್ಯ ವರ್ಗಕ್ಕೆ ಪರಿವರ್ತಿಸಲಾಗುವುದು.
3. ಈ ಮುಕ್ತ ಕೌನ್ಸಲಿಂಗ್ ಪ್ರಕ್ರಿಯೆಯಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು NTS Scholarship ಪಡೆಯಲು ಅರ್ಹರಾಗಿರುವುದಿಲ್ಲ.
4. ಈಗಾಗಲೇ KCET-2024 ಮತ್ತು CUET (ICAR)-2024 ಪ್ರವೇಶಾತಿ ಪ್ರಕ್ರಿಯೆಯಿಂದ ಆಯ್ಕೆಯಾಗಿ, ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ / ಇಂಜಿನಿಯರಿಂಗ್ / ವೈದ್ಯಕೀಯ (NEET) ಯಾವುದೇ ಪದವಿಗಳಿಗೆ ಮತ್ತು NRI ಕೋಟಾದಡಿ ರಾಜ್ಯದ ಯಾವುದೇ ರಾಜ್ಯದ ಕೃಷಿ / ತೋಟಗಾರಿಕೆ ಹಾಗೂ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯದ ಸ್ನಾತಕ ಪದವಿಗಳಿಗೆ ಪ್ರವೇಶ ಪಡೆದಿರುವ ಅಭ್ಯರ್ಥಿಗಳು ಈ ಮುಕ್ತ ಕೌನ್ಸಲಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವಂತಿಲ್ಲ. ಆದರೆ ಅಧಿಕೃತ ಅಧಿಕಾರಿಗಳಿಂದ/ಕುಲಸಚಿವರಿಂದ ಪಡೆದ ಪ್ರವೇಶ ರದ್ದತಿ ಆದೇಶವನ್ನು ಲಗತ್ತಿಸಿದ್ದಲ್ಲಿ ಅಭ್ಯರ್ಥಿಯ ಅರ್ಜಿಯನ್ನು ಪ್ರವೇಶಾತಿ ಸಮಿತಿಯು ಪರಿಶೀಲಿಸಿದ ನಂತರ ಪರಿಗಣಿಸಲಾಗುವುದು.
5. ಈ ಮುಕ್ತ ಕೌನ್ಸಲಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಎಲ್ಲಾ ಅಭ್ಯರ್ಥಿಗಳು ಕಡ್ಡಾಯವಾಗಿ ಮತ್ತು CUET (ICAR)-2024 ಪ್ರವೇಶಾತಿ ಪ್ರಕ್ರಿಯೆಯಲ್ಲಿ ಪರಿಶೀಲಿಸಲಾಗಿದ್ದ/ಸಲ್ಲಿಸಿದ್ದ ಎಲ್ಲಾ ಮೂಲ ದಾಖಲಾತಿಗಳನ್ನು ಮತ್ತು ಮೂಲ ದಾಖಲಾತಿಗಳ ಎರಡು ಸೆಟ್ ಜೆರಾಕ್ಸ್ ಪ್ರತಿಗಳನ್ನು ಪರಿಶೀಲನೆಗೆ ತರಬೇಕಾಗಿರುತ್ತದೆ, ಇಲ್ಲವಾದಲ್ಲಿ ಅಭ್ಯರ್ಥಿಗಳು ಮುಕ್ತ ಕೌನ್ಸಲಿಂಗ್‌ನಲ್ಲಿ ಭಾಗವಹಿಸಲು ಅರ್ಹರಾಗಿರುವುದಿಲ್ಲ.
6. ಸದರಿ ಪ್ರಕ್ರಿಯೆಯಲ್ಲಿ ಆಯ್ಕೆಯಾಗುವ ಅಭ್ಯರ್ಥಿಗಳು ರೂ. 35,975/- ಪ್ರವೇಶ ಶುಲ್ಕವನ್ನು ನಗದಾಗಿ ಸ್ಥಳದಲ್ಲಿಯೇ ಕಡ್ಡಾಯವಾಗಿ ಪಾವತಿಸಬೇಕಾಗಿರುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ: ಪೋಷಕರ ವಾರ್ಷಿಕ ವರಮಾನ ರೂ.2.5ಲಕ್ಷದೊಳಗೆ ಇದ್ದಲ್ಲಿ ಅಂತಹ ಅಭ್ಯರ್ಥಿಗಳು ಪ್ರವೇಶ ಶುಲ್ಕವನ್ನು ಪಾವತಿಸುವಂತಿಲ್ಲ, ವಾರ್ಷಿಕ ವರಮಾನ ರೂ2.5 ಲಕ್ಷದಿಂದ ರೂ.10 ಲಕ್ಷದೊಳಗಿದ್ದರೆ ಒಟ್ಟು ಪ್ರವೇಶ ಶುಲ್ಕದ ಶೇಕಡ 50ರಷ್ಟು (ರೂ.17,988) ಮೊತ್ತವನ್ನು ಮುಕ್ತ ಕೌನ್ಸಿಲಿಂಗ್ ಪ್ರವೇಶಾತಿ ಸಮಯದಲ್ಲಿ ಪಾವತಿಸಬೇಕು. ವಾರ್ಷಿಕ ವರಮಾನ ರೂ. 10 ಲಕ್ಷಕ್ಕಿಂತ ಹೆಚ್ಚಿದ್ದಲ್ಲಿ ಸಾಮಾನ್ಯ ಅಭ್ಯರ್ಥಿಗಳಿಗೆ ನಿಗದಿಪಡಿಸಿರುವ ಪೂರ್ಣ ಶುಲ್ಕವನ್ನು (ರೂ. 35,975) ಪಾವತಿಸಬೇಕು. (ಇತರೆ ಶುಲ್ಕಗಳನ್ನು ಆಯಾ ಕೃವಿವಿಗಳ ಸೂಚನೆಯಂತೆ ಅಭ್ಯರ್ಥಿಗಳು ಪಾವತಿಸತಕ್ಕದ್ದು) ಇಲ್ಲವಾದಲ್ಲಿ ಅಭ್ಯರ್ಥಿಗಳ ಸೀಟನ್ನು ರದ್ದುಗೊಳಿಸಲಾಗುವುದು.
7. ಈ ಮುಕ್ತ ಕೌನ್ಸಲಿಂಗ್‌ನಲ್ಲಿ ಭಾಗವಹಿಸುವ ಅಭ್ಯರ್ಥಿಗಳು ಈ ಮೊದಲು ರಾಜ್ಯದ ಯಾವುದೇ ಕೃಷಿ ವಿಶ್ವವಿದ್ಯಾಲಯ/ತೋಟಗಾರಿಕೆ ವಿಶ್ವವಿದ್ಯಾಲಯ ಅಥವಾ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪಡೆದಿರುವುದಿಲ್ಲವೆಂದು ಮುಚ್ಚಳಿಕೆಯನ್ನು ನೀಡಬೇಕು.
8. ಈ ಮುಕ್ತ ಕೌನ್ಸಿಲಿಂಗ್ ಪ್ರಕ್ರಿಯೆಯಲ್ಲಿ ಪಾವತಿಸಿದ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸುವುದಿಲ್ಲ.
9. ಈ ಮುಕ್ತ ಕೌನ್ಸಿಲಿಂಗ್ ಮತ್ತು ಪ್ರವೇಶಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ರಾಜ್ಯದ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯಗಳ ಒಮ್ಮತದ ತೀರ್ಮಾನವೇ ಅಂತಿಮವಾಗಿರುತ್ತದೆ.

ಆಯ್ಕೆಯಾದ ಅಭ್ಯರ್ಥಿಗಳು ಆಯಾ ವಿಶ್ವ ವಿದ್ಯಾನಿಲಯ/ ಕಾಲೇಜುಗಳಿಗೆ ದಿನಾಂಕ 06.12.2024ರ ಸಾಯಂಕಾಲ 4.00 ಘಂಟೆಯೊಳಗೆ ಕಡ್ಡಾಯವಾಗಿ ಪ್ರವೇಶಾತಿ ಪಡೆಯಬೇಕು.

ಆದೇಶದ ಮೇರೆಗೆ

ಕೃವಿವಿ, ಜಿ.ಕೆ.ವಿ.ಕೆ
ಕುಲಸಚಿವರು
ಬೆಂಗಳೂರು - 560 065

27/11/24

ಕುಲಸಚಿವರು
ಕೃವಿವಿ, ಬೆಂಗಳೂರು
(ರಾಜ್ಯದ ಎಲ್ಲಾ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾನಿಲಯಗಳ ಪರವಾಗಿ)

ಪ್ರತಿಗಳು ಸೂಕ್ತ ಕ್ರಮಕ್ಕಾಗಿ ಹಾಗೂ ಮಾಹಿತಿಗಾಗಿ:
1. ಮಾನ್ಯ ಕುಲಪತಿಗಳು/ಶಿಕ್ಷಣ ನಿರ್ದೇಶಕರು/ಕುಲಸಚಿವರು, ಕೃವಿವಿ, ಬೆಂಗಳೂರು/ಧಾರವಾಡ/ರಾಯಚೂರು, ಕೃತೋವಿ, ಶಿವಮೊಗ್ಗ/ತೋವಿ, ಬಾಗಲಕೋಟೆ
2. ಟೀಮ್ ಲೀಡರ್, ಎನ್.ಐ.ಸಿ.